ಕರ್ನಾಟಕ ವಿಧಾನ ಸಭೆ

ಶನಿವಾರ ೧೮ನೇ ಜೂನ್ ೧೯೮೮

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ

೧೦-೧೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ಸಾಂಖ್ಯಿಕ ಸಚಿವರು).— ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

೧೯೮೬-೮೭ನೇ ಇಸವಿಯ ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೫೪ (೨೫ನೇ ಕಲಮಿನ ಮೇರೆಗೆ—

೧. ೧೯೮೬-೮೭ನೇ ಸಾಲಿನ ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ೮ ಗ್ರಾಮಗಳಿಗೆ ಭೂಕಂದಾಯವನ್ನು ಮನ್ನಾ ಮಾಡುವುದರ ಬಗ್ಗೆ ದಿನಾಂಕ ೧೭-೬-೮೮ ರಂದು ಹೊರಡಿಸಲಾದ ಸಂಖ್ಯೆ ಆರ್‌ಡಿ ೧೬ ಟಿಆರ್‌ಎಂ ೮೮ನೇ ಕ್ರಮಾಂಕದ ಅಧಿಸೂಚನೆ

೨. ೧೯೮೬-೮೭ನೇ ಸಾಲಿನ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ೧೭ ಗ್ರಾಮಗಳಿಗೆ ಭೂಕಂದಾಯವನ್ನು ಮನ್ನಾ ಮಾಡುವುದರ ಬಗ್ಗೆ ದಿನಾಂಕ ೪-೬-೮೮ ರಂದು ಹೊರಡಿಸಲಾದ ಸಂಖ್ಯೆ ಆರ್‌ಡಿ ೧೫೫ ಟಿಆರ್‌ಎಂ ೮೮ನೇ ಕ್ರಮಾಂಕದ ಅಧಿಸೂಚನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಎಂ. ಪಿ. ಪ್ರಕಾಶ್‌ರವರ ಹೆಸರಿನ ಮುಂದೆ ಇರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

೧೯೮೬ನೇ ಇಸವಿಯ ಕರ್ನಾಟಕ ಚಲನಚಿತ್ರ (ನಿಬಂಧನೆ) ಶಾಸನದ ೨೨ನೇ ಕಲಮಿನ ಮೇರೆಗೆ—

೧. ಶ್ರೀ ಆರ್. ರಾಜೇಂದ್ರನ್ ಮಾಲೀಕರು ಶ್ರೀ ಮಂಜುನಾಥ ಸಂಚಾರಿ ಚಿತ್ರಮಂದಿರ ಇದನ್ನು ಅರೆ ಖಾಯಂ ಚಿತ್ರಮಂದಿರವನ್ನಾಗಿ ಪರಿವರ್ತಿಸಲು ಕೋರಿ ಅರ್ಜಿಯನ್ನು ಹಾಕಲು ವಿಳಂಬವಾದದ್ದನ್ನು ಮನ್ನಾ ಮಾಡುವುದರ ಬಗ್ಗೆ ದಿನಾಂಕ ೧೯-೫-೮೮ ರಂದು ಹೊರಡಿಸಲಾದ ಸಂಖ್ಯೆ ಹೆಚ್.ಡಿ.೨೭ ಸಿಎಸ್‌ಎ ೮೮ನೇ ಕ್ರಮಾಂಕದ ಅಧಿಸೂಚನೆ;

೨. ಶ್ರೀ ತಿಪ್ಪೇಸ್ವಾಮಿ, ಮಾಲೀಕರು ಮೆಕಟೇಶ್ವರ ಸಂಚಾರಿ ಚಿತ್ರಮಂದಿರ ಇದನ್ನು ಅರೆ ಖಾಯಂ ಚಿತ್ರಮಂದಿರವನ್ನಾಗಿ ಪರಿವರ್ತಿಸಲು ಕೋರಿ ಅರ್ಜಿಯನ್ನು ಹಾಕಲು ವಿಳಂಬವಾದದ್ದನ್ನು ಮನ್ನಾ ಮಾಡುವುದರ ಬಗ್ಗೆ ದಿನಾಂಕ ೬-೪-೮೮ ರಂದು ಹೊರಡಿಸಲಾದ ಸಂಖ್ಯೆ ಜೆಜ್.ಡಿ ೧೫೬ಎಸ್‌ಎಲ್ ೮೮ನೇ ಕ್ರಮಾಂಕದ ಅಧಿಸೂಚನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅರ್ಜಿಯನ್ನೊಪ್ಪಿಸುವುದು

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೆ, ಶ್ರೀ ಜಿ. ರಾಮಂದಾಸ್ ಅವರ ಬೆಸರಿನ ಮುಂದೆ ಇರುವ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

"ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಸಮಯದಲ್ಲಿ ೫ ವರ್ಷ ಸೇವೆಯನ್ನಾಗಿರುವ ಟಿ. ಸಿ. ಪೆಚ್. ಶಿಕ್ಷಣ ಪಡೆದಿರುವಂತಹವರಿಗೆ ಆದ್ಯತೆ ಕೊಡುವ ಬಗ್ಗೆ"

ಅಧ್ಯಕ್ಷರು.—ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

೩. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ತಿದ್ದುಪಡಿ.

ಶ್ರೀ ಚಂದ್ರಶೇಖರರೆಡ್ಡಿ ದೇಶಮುಖ್ ಮದನ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ (೨೭೦) (ಅ) ನಿಯಮದ ಅಡಿಯಲ್ಲಿ ಬರುವ ೩ನೇ ಅನುಸೂಚಿಗೆ ತಿದ್ದುಪಡಿಗಳನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಇದರ ಉದ್ದೇಶ ಏನೆಂಬುದು ನಮಗೆ ಗೊತ್ತಾಗಬೇಕು. ಇದರ ಉದ್ದೇಶವನ್ನು ಮಾನ್ಯ ಸದಸ್ಯರು ಹೇಳಬೇಕು. ಏಕೆಂದರೆ ಡಿಲೀಟ್ ಮಾಡತಕ್ಕದ್ದು ಸುಮಾರು ೧-೨-೩-೪-೫-೬-೭-೮ ಇಂಡಸ್ಟ್ರೀಸ್ ಇದೆ. ಮತ್ತು ಸೇರಿಸತಕ್ಕಂಥಾದ್ದೂ ಇದೆ. ಲಾಸ್ ಆಗಿದೆ ಎಂದು ಏನೂ ಇದರಲ್ಲಿ ಇಲ್ಲ. ಆದ್ದರಿಂದ ಯಾವ ಆಧಾರದ ಮೇಲೆ ಇವನ್ನು ಡಿಲೀಟ್ ಮಾಡುತ್ತಾ ಇದ್ದೀರಿ. ಇದಕ್ಕೆ ಕಾರಣ ಏನು ಮತ್ತು ಹೊಸದಾಗಿ ಏನು ಸೇರಿಸುತ್ತಾ ಇದ್ದೀರಿ. ಅದಕ್ಕೆ ಕಾರಣ ಏನು ಎನ್ನತಕ್ಕಂಥಾದ್ದನ್ನು ಹೇಳಿದರೆ ನಮಗೆ ಸ್ವಲ್ಪ ಗೊತ್ತಾಗುತ್ತದೆ.

ಅಧ್ಯಕ್ಷರು.—೫ ನಿಮಿಷದಲ್ಲಿ ಹೇಳಿ.

ಶ್ರೀ ಚಂದ್ರಶೇಖರರೆಡ್ಡಿ ದೇಶಮುಖ್ ಮದನ.—ಮಾನ್ಯ ಅಧ್ಯಕ್ಷರೆ, ಇಲ್ಲಿ ಕೆಲವೊಂದು ಇಂಡಸ್ಟ್ರೀಸ್‌ನ್ನು ತೆಗೆದು ಹಾಕಿದ್ದೇವೆ. ಅವು ಯಾವುವೆಂದರೆ,

1) The Karnataka Dairy Development Corporation Limited, Bangalore,
2) The Karnataka Milk Products Limited, Bangalore;
3) The Karnataka Shoping Corporation Limited;
4) The Karnataka Copper Consortim Limited, Bangalore;
5) The Canara Chemicals & Fertilizers Limited, Bangalore Chitradurga Copper Company, Limited, Bangalore.
6) Vignan Industries Limited, Tarikere.
7) Karnataka Rose wood Products Limited, Mangalore
8) Mysore Tobacco Company Limited.
9) Karnataka Backward Classes and Miniorities Development Corporation Limited, Bangalore.

ಇವನ್ನೆಲ್ಲಾ ತೆಗೆದುಹಾಕಿದೆ. ಸೇರಿಸಿದ್ದು ಯಾವುವೆಂದರೆ,—

1) Karnataka Telelom Limited,
2) Karnataka Inland Fisheries Development Company Ltd.,
3) Karnataka State Coir Development Company Limited,